# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳಿಗೆ ಕಾರ್ಯಕಾರಿ ಆದೇಶದ ಮೂಲಕ ನೇಮಕಾತಿ ವಿಧಾನವನ್ನು ನಿಗಧಿಪಡಿಸುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 306 ಕೆಎಸ್ ಎಸ್ 2005, ದಿನಾಂಕ:20-01-2011.
2) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 181 ಗ್ರಾಪಂಕಾ 2011, ದಿನಾಂಕ: 31-03-2012.
3) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 44 ಗ್ರಾಪಂಸಿ 2015, ದಿನಾಂಕ: 22-04-2017.
4) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 44 ಗ್ರಾಪಂಸಿ 2015, ದಿನಾಂಕ: 27-02-2019.

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿರ್ದಿಷ್ಟಪಡಿಸಲಾಗಿದೆ. ಸದರಿ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಂಬಂಧಿಸಿದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2), (3) ಮತ್ತು (4) ರ ಸರ್ಕಾರದ ಅಧಿಸೂಚನೆಯಲ್ಲಿ ತಿದ್ದುಪಡಿ ತರಲಾಗಿದೆ.

ಆರ್ಥಿಕ ಇಲಾಖೆಯ ಅಭಿಪ್ರಾಯದ ಹಿನ್ನೆಲೆಯಲ್ಲಿ, ಕೋವಿಡ್-19 (ಕೋರೋನಾ) ಸಾಂಕ್ರಾಮಿಕ ರೋಗದಿಂದಾಗಿ ಗ್ರೇಡ್-2 ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಗ್ರಾಮ ಪಂಚಾಯತಿಗಳ ಬಿಲ್‌ಕಲೆಕ್ಟರ್ / ಗುಮಾಸ್ತರ ಹುದ್ದೆಯಿಂದ ಆಯ್ಕೆ ಮೂಲಕ ನೇರ ನೇಮಕಾತಿ ಮಾಡಬೇಕಾಗಿರುವುದರಿಂದ ಕೋವಿಡ್-19 ನಿಂದಾಗಿ ಉಂಟಾಗಿರುವ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಯಾವುದೇ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ತಡೆಹಿಡೆಯಲಾಗಿತ್ತು.

ಪ್ರಸ್ತುತ ಆರ್ಥಿಕ ಇಲಾಖೆಯು ಗ್ರಾಮ ಪಂಚಾಯತಿಗಳಲ್ಲಿ ಖಾಲಿ ಇರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಸೇವೆಯೊಳಗಿನ ನೇರ ನೇಮಕಾತಿ ಕೋಟಾದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಂದ ಲಭ್ಯವಾಗುವ ಹುದ್ದೆಗಳನ್ನು ಆಯ್ಕೆ ಮೂಲಕ ನಿಯಮಾನುಸಾರ ತುಂಬಲು ಸಹಮತಿಸಿರುತ್ತದೆ.

ಗ್ರಾಮ ಪಂಚಾಯತಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬಿಲ್ ಕಲೆಕ್ಟರ್‌ಗಳು ವಯೋನಿವೃತ್ತಿ ಹೊಂದುವ ಅಂಚಿನಲ್ಲಿದ್ದು ಸೇವೆಯೊಳಗೆ ನೇರ ನೇಮಕಾತಿ ಹೊಂದಲು ಅವಕಾಶ ವಂಚಿತರಾಗಲಿದ್ದು ಮತ್ತು ಗ್ರಾಮ ಪಂಚಾಯತಿಗಳಲ್ಲಿ ಬಿಲ್ ಕಲೆಕ್ಟರ್, ಲೆಕ್ಕಿಗರು, ಗುಮಾಸ್ತರು, ಬೆರಳಚ್ಚುಗಾರ ವೃಂದದ ನೌಕರರ ಜೊತೆಗೆ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ವೃಂದದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಕೂಡಾ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳಿಗೆ ಸೇವೆಯೊಳಗೆ ನೇರ ನೇಮಕಾತಿ ಮಾಡಲು ಅವಕಾಶ ಕಲ್ಪಿಸಬೇಕಾಗಿರುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸಾಕಷ್ಟು ಕಾಲಾವಕಾಶ ಬೇಕಾಗಿರುವುದರಿಂದ ಕಾರ್ಯಕಾರಿ ಆದೇಶದ ಮೂಲಕ ನೇಮಕಾತಿ ವಿಧಾನವನ್ನು ನಿಗಧಿಪಡಿಸಿ ಭರ್ತಿ ಮಾಡಲು ಉದ್ದೇಶಿಸಲಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು, 2008 ಕ್ಕೆ

ತಿದ್ದುಪಡಿ ತರುವುದನ್ನು ಕಾಯ್ದಿರಿಸಿ, ಕಾರ್ಯಕಾರಿ ಆದೇಶ ಹೊರಡಿಸುವ ಮೂಲಕ ಮೇಲ್ಕಂಡ ಹುದ್ದೆಗಳಿಗೆ ನೇಮಕಾತಿ ವಿಧಾನವನ್ನು ಜಾರಿಗೆ ತರಲು ಸರ್ಕಾರವು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.ಪಿ.ಆರ್. 630 ಜಿ.ಪಿ.ಎಸ್. 2020 (ಭಾಗ-1)**
**ಬೆಂಗಳೂರು. ದಿನಾಂಕ:05.09.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಸೇವೆಯೊಳಗಿನ ನೇರ ನೇಮಕಾತಿ ಕೋಟಾದಲ್ಲಿ ಲಭ್ಯವಾಗುವ ಖಾಲಿ ಹುದ್ದೆಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವಂತೆ ನೇಮಕಾತಿ ವಿಧಾನವನ್ನು ನಿಗಧಿಪಡಿಸಿ ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ಬಿ. ಅಂಜನಪ್ಪ)**
ನಿರ್ದೇಶಕರು (ಪಂ.ರಾಜ್-1) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಸಂಕಲನಕಾರರು , ಕರ್ನಾಟಕ ರಾಜ್ಯ ಪತ್ರ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಲು.
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ
4. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
5. ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ.
6. ರಿಜಿಸ್ಟ್ರಾರ್, ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ.
7. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಹಳೆ ಕಟ್ಟಡ ಕಛೇರಿ, ಕೆ.ಜಿ.ರಸ್ತೆ, ಬೆಂಗಳೂರು.
8. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
9. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು.
10. ಉಪ ಕಾರ್ಯದರ್ಶಿಗಳು (ಅಭಿವೃದ್ಧಿ), ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು.
11. ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳು.
12. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು.
13. ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
14. ಮಾಹಿತಿ ಕೇಂದ್ರ/ ವೆಬ್‌ಸೈಟ್, ಗ್ರಾಅಪ ಇಲಾಖೆ

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.
3. ಹೆಚ್ಚುವರಿ ಪ್ರತಿ/ ಶಾಖಾ ರಕ್ಷಾ ಕಡತಕ್ಕೆ.

| Sl. No. | Name of the Post and Scale of Pay | No. of Posts | Method of Recruitment | Minimum Qualification |
|---|---|---|---|---|
| 1 | 2 | 3 | 4 | 5 |
| 10 | Grama Panchayat Secretary and Rural Development Assistant (Grade-II)<br><br>(Rs 21,400-42,000) | 3827 | (i) Thirty Percent by direct recruitment in accordance with the Karnataka Civil Services (Direct Recruitment) (General) Rules, 2021;<br><br>(ii) Seventy percent by in service direct recruitment by selection in the ratio of 3:2 i.e, - three vacancies from among the persons working as Bill Collectors and two vacancies from among the persons working as Accountants / Clerks / Typists / Clerk cum Data Entry Operator in the erstwhile Mandal Panchayats or in the Grama Panchayats continuously for more than six years as the case may be by the appointing authority, in accordance with the following procedures, namely:-<br><br>(1) The Appointing Authority shall prepare and publish the District wise separate seniority list of eligible candidates who are working continuously for six years from the date of appointment in the post of Bill Collectors and another separate seniority list of eligible candidates who are working continuously for six years from the date of appointment in the post of Accountants, | **For direct Recruitment:** (1) Must have passed Pre University Course or equivalent qualification; and<br><br>(2) Must be a computer literate.<br><br>**For in-service direct recruitment:** (1) Must have passed Pre University Course or equivalent qualification; and<br><br>(2) Must have put in a continuous service of not less than six years as Bill Collectors / Accountants / Clerks / Typists / Clerk cum Data Entry Operator in the erstwhile Mandal Panchayats or in the Grama Panchayats as the case may be and must be working as such on the date of application for in-service direct recruitment:<br><br>Provided that, the prescribed qualification of pass in Pre University Course or equivalent qualification for in-service direct recruitment shall not be applicable for Bill collectors, Accountants, Clerks, Typists, Clerk cum Data Entry Operator or in the erstwhile Mandal Panchayats or in the Grama Panchayat who |

| | | | | |
|---|---|---|---|---|
| | | | Clerks, Typists, Clerk Cum Data Entry Operator on the basis of their date of appointment in the erstwhile Mandal Panchayts, in accordance with instructions contained in O.M. No RDP 8 ZPT 87, dated 07-05-1988 or in the Grama Panchayats appointed in accordance with section 112 and 113 of Karnataka Gram Swaraj and Panchayat Raj Act, 1993 in respect of Grama Panchayats respectively.<br><br>**(2) Mode of selection for in-service Direct Recruitment.-** (i) The Commissioner, Panchayat Raj Commissionerate is the facilitator in between the Appointing Authority and the Rural Development and Panchayat Raj University which is conducting the examination for selection purpose to the posts of Gram Panchayat Secretary Grade-2 in-service direct recruitment.<br><br>(ii)The appointing authority shall notify the number of vacant posts along with the roster points to be filled and to publish the same in more than two widely circulating news papers out of which at least one shall be the Kannada and call for the applications from the eligible willing candidates which is prepared as per conditions stipulated in (1) above.<br><br>(iii) The appointing authority shall scrutinize | are already in service with SSLC or equivalent qualification on the date of commencement of the Karnataka Civil Services (Recruitment to the Ministerial Posts) (Amendment) Rules, 2013, which came into effect from 02-01-2014. |

| | | | | |
|---|---|---|---|---|
| | | | the applications submitted by the candidates and send the list of candidates along with their office address to the Commissioner, Panchayat Raj and the Commissioner Panchayat Raj has to send the list of the candidates to the Rural Development and Panchayat Raj University for arranging the examination.<br><br>(iv) The Rural Development and Panchayat Raj University has to conduct the examination for these candidates as specified in Annexure-I and Annexure-II of these rules, and the Rural Development University has to prepare the list of the candidates along with the marks obtained in the examination and to send the same to the Commissioner, Panchayat Raj. The Commissioner has to send the same list of candidates along with the marks to the Appointing Authorities.<br><br>(v) The Appointing Authority has to arrange the list of the candidates along with their marks and to prepare the list of the candidates, who have obtained 40 marks and above, along with the reservation category claimed by the candidates. Then the Appointing Authority has to select the name of the candidates who are eligible to the concerned reserved category strictly in accordance with the seniority list prepared as stipulated in (1) above and depending upon the vacancies notified by the Appointing | |

| | | | | |
|---|---|---|---|---|
| | | | Authority.<br><br>**(3)** Subject to reservation as stipulated by the Government from time to time, two final select lists of candidates, one belonging to Bill Collectors and another belonging to Accountants, Clerks, Typists, Clerk cum Data Entry Operator, for in-service direct recruitment under clause (v) shall be prepared by the Appointing Authority equal to the number of vacancies notified under this clause;<br><br>(4) The Appointing Authority may appoint the candidates whose names are included in the select list in the order in which their names appear in the select list after satisfying itself on such enquiry as may be considered necessary that such candidates are suitable in all respects for such appointment;<br><br>**(5)** The inclusion of the names of the candidates in the final selection list shall not confer any right of appointment. | |

| Sl. No. | Name of the Post and Scale of Pay | No. of Posts | Method of Recruitment | Minimum Qualification |
|---|---|---|---|---|
| 1 | 2 | 3 | 4 | 5 |
| 10-A | Second Division Accounts Assistants (Rs 21,400-42,000) | 2579 | (i) Fifty Percent by direct recruitment in accordance with the Karnataka Civil Services (Direct Recruitment) (General) Rules, 2021;<br><br>(ii) Fifty Percent by in service direct recruitment by selection in the ratio of 1:1 i.e, - first vacancy from among the persons working as Bill Collectors and Second vacancy from among the persons working as Accountants / Clerks / Typists / Clerk cum Data Entry Operator in the erstwhile Mandal Panchayats or in the Grama Panchayats continuously for more than six years as the case may be by the appointing authority, in accordance with the following procedures, namely:-<br><br>(1) The Appointing Authority shall prepare and publish the District wise separate seniority list of eligible candidates who are working continuously for six years from the date of appointment in the post of Bill Collectors and another separate seniority list of eligible candidates who are working continuously for six years from the date of appointment in the post of Accountants, Clerks, Typists, Clerk Cum Data Entry | **For direct Recruitment:** (1) Must have passed Pre University Course with subject of Commerce or equivalent qualification; and<br><br>(2) Must be a computer literate.<br><br>**For in-service direct recruitment:** (1) Must have passed Pre University Course with subject of Commerce or equivalent qualification; and<br><br>(2) Must have put in a continuous service of not less than six years as Bill Collectors / Accountants / Clerks / Typists / Clerk cum Data Entry Operator in the erstwhile Mandal Panchayats or in the Grama Panchayats as the case may be and must be working as such on the date of application for in-service direct recruitment:<br><br>Provided that, the prescribed qualification of pass in Pre University Course or equivalent qualification for in-service direct recruitment shall not be applicable for Bill collectors, Accountants, Clerks, Typists, Clerk cum Data Entry Operator or in the erstwhile Mandal Panchayats or in the Grama |

| | | | | |
|---|---|---|---|---|
| | | | Operator on the basis of their date of appointment in the erstwhile Mandal Panchayts, in accordance with instructions contained in O.M. No RDP 8 ZPT 87, dated 07-05-1988 or in the Grama Panchayats appointed in accordance with section 112 and 113 of Karnataka Gram Swaraj and Panchayat Raj Act, 1993 in respect of Grama Panchayats respectively.<br><br>**(2) Mode of selection for in-service Direct Recruitment.-** (i) The Commissioner, Panchayat Raj Commissionerate is the facilitator in between the Appointing Authority and the Rural Development and Panchayat Raj University which is conducting the examination for selection purpose to the posts of Second Division Accounts Assistants in-service direct recruitment.<br><br>(ii) The appointing authority shall notify the number of vacant posts along with the roster points to be filled and to publish the same in more than two widely circulating news papers out of which at least one shall be the Kannada and call for the applications from the eligible willing candidates which is prepared as per conditions stipulated in (1) above.<br><br>(iii) The appointing authority shall scrutinize the applications submitted by the candidates | Panchayat who are already in service with SSLC or equivalent qualification on the date of commencement of the Karnataka Civil Services (Recruitment to the Ministerial Posts) (Amendment) Rules, 2013, which came into effect from 02-01-2014. |

| | | | | |
|---|---|---|---|---|
| | | | and send the list of candidates along with their office address to the Commissioner, Panchayat Raj and the Commissioner Panchayat Raj has to send the list of the candidates to the Rural Development and Panchayat Raj University for arranging the examination.<br><br>(iv) The Rural Development and Panchayat Raj University has to conduct the examination for these candidates as specified in Annexure-I and Annexure-II of these rules, and the Rural Development University has to prepare the list of the candidates along with the marks obtained in the examination and to send the same to the Commissioner, Panchayat Raj. The Commissioner has to send the same list of candidates along with the marks to the Appointing Authorities.<br><br>(v) The Appointing Authority has to arrange the list of the candidates along with their marks and to prepare the list of the candidates, who have obtained 40 marks and above, along with the reservation category claimed by the candidates. Then the Appointing Authority has to select the name of the candidates who are eligible to the concerned reserved category strictly in accordance with the seniority list prepared as stipulated in (1) above and depending upon the vacancies notified by the Appointing Authority. | |

| | | | | |
|---|---|---|---|---|
| | | | (3) Subject to reservation as stipulated by the Government from time to time, two final select lists of candidates, one belonging to Bill Collectors and another belonging to Accountants, Clerks, Typists, Clerk cum Data Entry Operator, for in-service direct recruitment under clause (v) shall be prepared by the Appointing Authority equal to the number of vacancies notified under this clause;<br><br>(4) The Appointing Authority may appoint the candidates whose names are included in the select list in the order in which their names appear in the select list after satisfying itself on such enquiry as may be considered necessary that such candidates are suitable in all respects for such appointment;<br><br>(5) The inclusion of the names of the candidates in the final selection list shall not confer any right of appointment. | |

**Annexure-I**

(See schedule)

**Competitive examination**

(i) The competitive examination shall consist of the following subject and marks to the post of Grama Panchayat Secretary and Rural Development Assistant (Grade-II) and Second Division Accounts Assistants namely:-

| Sl. No. | Subject | Number of Questions | Maximum Marks | Exam Duration |
|---|---|---|---|---|
| 1 | Karnataka Gram Swaraj and Panchayat Raj Act, 1993, Rural Development and Panchayat Raj Schemes and Programmes of the State Government and the Central Government | 40 | 40 | 90 Minutes |
| 2 | General Knowledge | 30 | 30 | |
| 3 | Computer Knowledge | 30 | 30 | |
| | **Total** | **100** | **100** | |

(ii) Question paper shall be objective type multiple Choice only.

**Annexure-II**

(see schedule)

**Syllabus**

The Competitive Examination consisting of the following syllabus for in service Direct Recruitment to the post of Grama Panchayat Secretary and Rural Development Assistant (Grade-II) and Second Division Accounts Assistants namely:-

(1) **Karnataka Gram Swaraj and Panchayat Raj Act, 1993 (Maximum Marks-40).-** Karnataka Gram Swaraj and Panchayat Raj Act, 1993 and Central and State schemes and programmes for Rural Development and Panchayath Raj; Ex., MGNREGA, SBM (G), JJM, 15th Finance Commission etc .,

(2) **General Knowledge (Maximum Marks-30).-** Matters of Every day observation, Indian History with special reference to Karnataka, Indian Geography with special reference to Karnataka, Indian constitution, State and Regional Administration, Awards and Honors, Economic development in Karnataka, Days and Events, Books and Authors, Environment problems and the development issues of Karnataka, Science and Technology; and

(3) **Computer Knowledge (Maximum Marks-30).-** Computer Fundamentals and Windows Word Processing, MS-Word, Spread sheet and MS-Excel, Computer communication, Internet, E-mail, Nudi Kannada software knowledge in word processing and Power Point.

By order and in the name
of the Governor of Karnataka

**(K.B. Anjanappa)**
Director (Panchayath Raj-1) and Ex-Officio
Joint Secretary to Government,
Rural Development and Panchayat Raj Department.

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 630 ಜಿಪಿಎಸ್ 2021 (ಭಾ-1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05.09.2021.

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

**ಇವರಿಗೆ:**

ಆಯುಕ್ತರು,
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಕೆ.ಜಿ. ರಸ್ತೆ, ಗಾಂಧಿನಗರ, ಬೆಂಗಳೂರು.

ಮಾನ್ಯರೆ

**ವಿಷಯ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೇವೆಯೊಳಗೆ ನೇರ ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 630 ಜಿಪಿಎಸ್ 2021 (ಭಾ-1), ದಿನಾಂಕ:05-09-2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೇವೆಯೊಳಗೆ ನೇರ ನೇಮಕಾತಿ ಮಾಡುವ ಬಗ್ಗೆ ಉಲ್ಲೇಖಿತ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಆದುದರಿಂದ ಸದರಿ ಆದೇಶದನ್ವಯ ಆಯುಕ್ತರು, ಪಂಚಾಯತ್ ರಾಜ್ ರವರನ್ನು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದೊಂದಿಗೆ ಸಮನ್ವಯ ಅಧಿಕಾರಿಗಳಾಗಿ ಗುರುತಿಸಿದ್ದು, ಅದರಂತೆ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಸೇವೆಯೊಳಗಿನ ನೇರ ನೇಮಕಾತಿಯನ್ನು ಮಾಡಲು ಉಲ್ಲೇಖಿತ ಸರ್ಕಾರದ ಆದೇಶದಂತೆ ಆಯ್ಕೆ ಮಾಡಲು ಸಮನ್ವಯ ಅಧಿಕಾರಿಗಳಾಗಿ ತುರ್ತು ಹಾಗೂ ಅವಶ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕೋರಿದೆ.

**(ಸರ್ಕಾರದ ಪ್ರಧಾನ ಕಾರ್ಯದರ್ಶಿ,**
**ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರವರಿಂದ ಅನುಮೋದಿತ)**

ತಮ್ಮ ವಿಶ್ವಾಸಿ,

**(ಕೆ.ಬಿ. ಅಂಜನಪ್ಪ)**
ನಿರ್ದೇಶಕರು (ಪಂ.ರಾಜ್-1) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 630 ಜಿಪಿಎಸ್ 2021 (ಭಾ–1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05.09.2021.

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

**ಇವರಿಗೆ:**

ರಿಜಿಸ್ಟ್ರಾರ್,
ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವ ವಿದ್ಯಾಲಯ,
ಗದಗ.

ಮಾನ್ಯರೆ

**ವಿಷಯ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್–2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೇವೆಯೊಳಗೆ ನೇರ ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 630 ಜಿಪಿಎಸ್ 2021 (ಭಾ–1), ದಿನಾಂಕ:05–09–2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್–2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೇವೆಯೊಳಗೆ ನೇರ ನೇಮಕಾತಿ ಮಾಡುವ ಬಗ್ಗೆ ಉಲ್ಲೇಖಿತ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಆದುದರಿಂದ ಸದರಿ ಆದೇಶದನ್ವಯ ಸೇವೆಯೊಳಗೆ ನೇರ ನೇಮಕಾತಿ ಮಾಡಲು ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದಿಂದ 100 ಅಂಕಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಅವಕಾಶ ಕಲ್ಪಿಸಲಾಗಿದೆ, ಅದರಂತೆ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಸೇವೆಯೊಳಗಿನ ನೇರ ನೇಮಕಾತಿಯನ್ನು ಮಾಡಲು ಉಲ್ಲೇಖಿತ ಸರ್ಕಾರದ ಆದೇಶದಂತೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ತುರ್ತು ಹಾಗೂ ಅವಶ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕೋರಿದೆ.

**(ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರವರಿಂದ ಅನುಮೋದಿತ)**

ತಮ್ಮ ವಿಶ್ವಾಸಿ,

**(ಕೆ.ಬಿ. ಅಂಜನಪ್ಪ)**
ನಿರ್ದೇಶಕರು (ಪಂ.ರಾಜ್–1) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 630 ಜಿಪಿಎಸ್ 2021 (ಭಾ-1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05.09.2021.

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

**ಇವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ

**ವಿಷಯ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೇವೆಯೊಳಗೆ ನೇರ ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 630 ಜಿಪಿಎಸ್ 2021 (ಭಾ-1), ದಿನಾಂಕ:05-09-2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೇವೆಯೊಳಗೆ ನೇರ ನೇಮಕಾತಿ ಮಾಡುವ ಬಗ್ಗೆ ಉಲ್ಲೇಖಿತ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಆದುದರಿಂದ ಸದರಿ ಆದೇಶದನ್ವಯ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಸೇವೆಯೊಳಗಿನ ನೇರ ನೇಮಕಾತಿಯನ್ನು ಮಾಡಲು ಉಲ್ಲೇಖಿತ ಸರ್ಕಾರದ ಆದೇಶದಂತೆ ಈ ಕೆಳಕಂಡಂತೆ ತುರ್ತು ಹಾಗೂ ಅವಶ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕೋರಿದೆ.

**i) <u>ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2):</u>**

1. ನೇಮಕಾತಿ ಪ್ರಾಧಿಕಾರವು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ವೃಂದದ ಶೇಕಡಾ 70ರಷ್ಟು ಹುದ್ದೆಗಳನ್ನು 3:2 ಅನುಪಾತದಲ್ಲಿ ಸೇವೆಯೊಳಗೆ ನೇರ ನೇಮಕಾತಿ ಮಾಡಲು ಅವಕಾಶವಿದ್ದು, ಸತತವಾಗಿ 6 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸುತ್ತಿರುವ ಅದರಲ್ಲಿ ಮೊದಲನೇ ಮೂರು ಖಾಲಿ ಹುದ್ದೆಗಳನ್ನು ಬಿಲ್ ಕಲೆಕ್ಟರ್ ವೃಂದದ ನೌಕರರಿಂದ ಮತ್ತು ತದನಂತರದ ಎರಡು ಖಾಲಿ ಹುದ್ದೆಗಳನ್ನು ಅಕೌಂಟೆಟ್ / ಕ್ಲರ್ಕ್ / ಟೈಪಿಸ್ಟ್ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟ್ ವೃಂದದ ನೌಕರರಿಂದ ಆಯ್ಕೆ ಮಾಡಬೇಕಾಗಿರುತ್ತದೆ.
2. ನೇಮಕಾತಿ ಪ್ರಾಧಿಕಾರವು ಸತತವಾಗಿ 6 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸುತ್ತಿರುವ ಬಿಲ್ ಕಲೆಕ್ಟರ್ ವೃಂದದ ಜೇಷ್ಠತಾ ಪಟ್ಟಿ ಮತ್ತು ಅಕೌಂಟೆಟ್ / ಕ್ಲರ್ಕ್ / ಟೈಪಿಸ್ಟ್ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟ್ ವೃಂದದ ಜೇಷ್ಠತಾ ಪಟ್ಟಿ ಪ್ರತ್ಯೇಕವಾಗಿ ತಯಾರಿಸಿ ಪ್ರಕಟಿಸಬೇಕು.
3. ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದಿಂದ 100 ಅಂಕಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಅವರಿಂದ ಅಂಕಗಳ ವಿವರ ಪಡೆದು ಆಯ್ಕೆ ಪಟ್ಟಿ ತಯಾರಿಸುವುದು.

4. ಸೇವೆಯೊಳಗಿನ ನೇರ ನೇಮಕಾತಿಗೆ ಲಭ್ಯವಾಗುವ ಹುದ್ದೆಗಳು ಮತ್ತು ಮೀಸಲಾತಿ ಪಾಲನೆ ಮಾಡುವುದು ಕಡ್ಡಾಯವಾಗಿರುತ್ತದೆ.
5. ಈಗಾಗಲೇ ಶೇಕಡಾ 30 ರಷ್ಟು ನೇರ ನೇಮಕಾತಿ ಕೋಟಾದ ಖಾಲಿ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಸದರಿ ನೇಮಕಾತಿ ಕೋಟಾದ ಹುದ್ದೆಗಳನ್ನು ಕಾಯ್ದಿರಿಸುವುದು.

**ii) <u>ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದ:</u>**

1. ನೇಮಕಾತಿ ಪ್ರಾಧಿಕಾರವು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ಶೇಕಡಾ 50ರಷ್ಟು ಹುದ್ದೆಗಳನ್ನು 1:1 ಅನುಪಾತದಲ್ಲಿ ಸೇವೆಯೊಳಗೆ ನೇರ ನೇಮಕಾತಿ ಮಾಡಲು ಅವಕಾಶವಿದ್ದು, ಸತತವಾಗಿ 6 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸುತ್ತಿರುವ ಅದರಲ್ಲಿ ಮೊದಲನೇ ಖಾಲಿ ಹುದ್ದೆಯನ್ನು ಬಿಲ್ ಕಲೆಕ್ಟರ್ ವೃಂದದ ನೌಕರರಿಂದ ಮತ್ತು ಎರಡನೇ ಖಾಲಿ ಹುದ್ದೆಯನ್ನು ಅಕೌಂಟೆಟ್ / ಕ್ಲರ್ಕ್ / ಟೈಪಿಸ್ಟ್ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟ್ ವೃಂದದ ನೌಕರರಿಂದ ಆಯ್ಕೆ ಮಾಡಬೇಕಾಗಿರುತ್ತದೆ.
2. ನೇಮಕಾತಿ ಪ್ರಾಧಿಕಾರವು ಸತತವಾಗಿ 6 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸುತ್ತಿರುವ ಬಿಲ್ ಕಲೆಕ್ಟರ್ ವೃಂದದ ಜೇಷ್ಠತಾ ಪಟ್ಟಿ ಮತ್ತು ಅಕೌಂಟೆಟ್ / ಕ್ಲರ್ಕ್ / ಟೈಪಿಸ್ಟ್ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟ್ ವೃಂದದ ಜೇಷ್ಠತಾ ಪಟ್ಟಿ ಪ್ರತ್ಯೇಕವಾಗಿ ತಯಾರಿಸಿ ಪ್ರಕಟಿಸಬೇಕು.
3. ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದಿಂದ 100 ಅಂಕಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಅವರಿಂದ ಅಂಕಗಳ ವಿವರ ಪಡೆದು ಆಯ್ಕೆ ಪಟ್ಟಿ ತಯಾರಿಸುವುದು.
4. ಸೇವೆಯೊಳಗಿನ ನೇರ ನೇಮಕಾತಿಗೆ ಲಭ್ಯವಾಗುವ ಹುದ್ದೆಗಳು ಮತ್ತು ಮೀಸಲಾತಿ ಪಾಲನೆ ಮಾಡುವುದು ಕಡ್ಡಾಯವಾಗಿರುತ್ತದೆ.
5. ಈಗಾಗಲೇ ಶೇಕಡಾ 50 ರಷ್ಟು ನೇರ ನೇಮಕಾತಿ ಕೋಟಾದ ಖಾಲಿ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಸದರಿ ನೇಮಕಾತಿ ಕೋಟಾದ ಹುದ್ದೆಗಳನ್ನು ಕಾಯ್ದಿರಿಸುವುದು.

**(ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರವರಿಂದ ಅನುಮೋದಿತ)**

ತಮ್ಮ ವಿಶ್ವಾಸಿ,

**(ಕೆ.ಬಿ. ಅಂಜನಪ್ಪ)**
ನಿರ್ದೇಶಕರು (ಪಂ.ರಾಜ್-1) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.